**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ, ಕುಣಿಗಲ್.**

ಸಿ.ಸಿ.ನಂ.115/2024

ಪಿ.ಡಬ್ಲ್ಯೂ -03

ಸಿ.ಡಬ್ಲ್ಯೂ-04

ಸಾಕ್ಷಿದಾರನ ಹೆಸರುಃ- ರವಿ

ತಂದೆಯ ಹೆಸರುಃ- ರಾಜಣ್ಣ

ವಯಸ್ಸುಃ- 45 ವರ್ಷ

ಉದ್ಯೋಗಃ- ಹೆಚ್ ಸಿ

ವಾಸಃ- ಅಮೃತೂರು

**ಸಾಕ್ಷಿಗೆ ದಿಃ 18.11.2025 ರಂದು ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ ರವರಿಂದ.**

**18.10.2021** ರಿಂದ ಇಲ್ಲಿಯವರೆಗೆ ನಾನು ಅಮೃತೂರು ಪೋಲಿಸ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 17.10.2023 ರಂದು ಸಂಜೆ 4.30 ಗಂಟೆಯ ಸಮಯದಲ್ಲಿ ನಾನು ಚಾ.ಸಾ. 1 ಅವರೊಂದಿಗೆ ಯಡಿಯೂರು ಬಸ್ ನಿಲ್ದಾಣದ ಬಳಿ ಗಸ್ತಿನಲ್ಲಿರುವಾಗ ಡಿ.ಎಸ್.ಪಿ ಅವರು ಚಾಸಾ 1 ಅವರಿಗೆ ಜಲದಗೆರೆ ರಸ್ತೆಗೆ ಬರುವಂತೆ ಸೂಚಿಸಿರುತ್ತಾರೆ. ನಾವು ಅಲ್ಲಿಗೆ ಹೋದಾಗ ಜಲದಗೆರೆ ಗ್ರಾಮದ 2ನೇ ಮುಖ್ಯ ರಸ್ತೆಯ ಕ್ರಾಸ್ ನಲ್ಲಿ ಡ್ಯೂಮೆಸ್ಟಿಕ್ ಗ್ಯಾಸ್ ಸಿಲಿಂಡರ ರಿ ಫಿಲಿಂಗ್ ಅನ್ನು ಅಕ್ರಮವಾಗಿ ಮಾಡುತ್ತಿದ್ದಾರೆಂದು ಮಾಹಿತಿಯನ್ನು ತಿಳಿಸಿರುತ್ತಾರೆ. ನಂತರ ನಾವು ಸದರಿ ಕ್ರಾಸ್ ನಲ್ಲಿ ಪಾಳು ಬಿದ್ದ ಹಳೆಯ ಮನೆಯ ಬಳಿ ಹೋಗಿದ್ದು ನನಗೆ ಮತ್ತು ಚಾಸಾ 5 ಅವರಿಗೆ ಡಿ.ಎಸ್.ಪಿ ಅವರು ಮನೆಯ ಮುಂಭಾಗದಲ್ಲಿರುವಂತೆ ಸೂಚಿಸಿದ್ದು ಅವರು ಮನೆಯ ಹಿಂಭಾಗ ಹೋಗಿ ನೋಡಿರುತ್ತಾರೆ. ಮನೆಯ ಒಸಗೆ ಗ್ಯಾಸ ರಿ ಫಿಲಿಂಗ್ ಮಾಡುತ್ತಿದ್ದ ವ್ಯಕ್ತಿ ಹೊರಗೆ ಬಂದಿದ್ದು ನಾವು ಆತನನ್ನು ಹಿಡಿದುಕೊಂಡಿರುತ್ತೇವೆ. ಡಿ.ಎಸ್.ಪಿ ಅವರು ಆತನ ಹೆಸರು ಮತ್ತು ವಿಳಾಸವನ್ನು ವಿಚಾರಣೆ ಮಾಡಿದ್ದು ತನ್ನ ಹೆಸರು ಲಕ್ಷ್ಮಿಕಾಂತ ಬಿನ್ ನಾಗರಾಜು ಯುಡಿಯೂರು ಗ್ರಾಮವೆಂದು ತಿಳಿಸಿರುತ್ತಾ ನೆ. ಆತನನ್ನು ಕರೆದುಕೊಂಡು ಮನೆಯ ಒಳಗೆ ಹೋಗಿ ನೋಡಲಾಗಿ ಹೆಚ್.ಪಿ ಗ್ಯಾಸ್ ಕಂಪನಿಯ 1 ತುಂಬಿದ ಮತ್ತು 4 ಖಾಲಿ, ಭಾರತ ಗ್ಯಾಸ ಕಂಪನಿಯ 6 ಖಾಲಿ ಮತ್ತು 1 ಅರ್ಧ

ಇರುವ ಸಿಲಿಂಡರ್ , 8 ಹೆಚ್.ಪಿ ಕಂಪನಿಯ ಕಮರ್ಶಿಯಲ್ ತುಂಬಿರುವ ಮತ್ತು 1 ಅರ್ಧ ಇದ್ದ ಸಿಲಿಂಡರ, ಒಂದು Electronic ತೂಕದ ಸ್ಕೇಲ್, ಗ್ಯಾಸ ರಿ ಫಿಲಿಂಗ್ ಮಾಡಲು ಬಳಸುವ ರಾಡ್ ಮತ್ತು 5 ಪ್ಲಾಸ್ಟಿಕ್ ಕ್ಯಾಪ್ ಗಳು ಇರುವುದನ್ನು ಕಂಡು ಬಂದಿರುತ್ತವೆ. ಆರೋಪಿಯನ್ನು ಇವುಗಳನ್ನುಹೊಂದಲು ಪರವಾನಿಗೆ ಕೇಳಲಾಗಿ ಇಲ್ಲವೆಂದು ತಿಳಿಸಿರುತ್ತಾನೆ. ಮನೆಯ ಬಗೆ ವಿಚಾರಿಸಿದಾಗ ಸದರಿ ಮನೆಯನ್ನು ರಾಮಚಂದ್ರಯ್ಯ ಅವರಿಂದ ಬಾಡಿಗೆಗೆ ಪಡೆದಿರುವುದಾಗಿ ತಿಳಿಸಿರುತ್ತಾನೆ. ನಂತರ ಆರೋಪಿ ವಿರುದ್ದ ಕಾನೂನು ಕ್ರಮ ಕೈಗೊಳ್ಳುವಂತೆ ಹೇಳಿ ಚಾಸಾ 1 ಅವರಿಗೆ ಸೂಚಿಸಿದ್ದು ಅವರು ಚಾಸಾ 5 ಅವರ ಮೂಲಕ ದೂರನ್ನು ಠಾಣೆಗೆ ಕೊಟ್ಟು ಕಳುಹಿಸಿರುತ್ತಾರೆ. ಪಂಚನಾಮೆಯನ್ನು ಚಾಸಾ 2 ಮತ್ತು 3, 5 ಹಾಗೂ 6 ಅವರ ಸಮಕ್ಷಮ ಸಂಜೆ 6.30ರಿಂದ 7.30 ರವರೆಗೆ ಮಾಡಿ ಮುಗಿಸಲಾಯಿತು. ನಾನು ನನ್ನ ಹೇಳಿಕೆ ನೀಡಿರುತ್ತೇನೆ. ಆರೋಪಿಯನ್ನು ಮತ್ತು ಮು. ಮಾ. ಗಳನ್ನು ಗುರುತಿಸುತ್ತೇನೆ. ಪಂಚನಾಮೆಗೆ ನನ್ನ ಸಹಿ ಇರುತ್ತದೆ ಅದನ್ನು ನಿ.ಪಿ 2(ಸಿ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಆರೋಪಿಗಳ ಪರಃ ಟಿ.ಜಿ.ಟಿ. ವಕೀಲರಿಂದಃ**

ಘಟನೆ ನಡೆದ ದಿನದ ನನ್ನ ಕರ್ತವ್ಯದ ಅವಧಿ ಬೆಳಿಗ್ಗೆ 8 ರಿಂದ ರಾತ್ರಿ 8 ಗಂಟೆಯವರೆಗೆ ಇತ್ತು. ನಾನು ನನ್ನ ಕೆಲಸಕ್ಕೆ ನಿಯೋಜನೆಗೊಂಡ ಬಗ್ಗೆ ಎಸ್.ಹೆಚ್.ಓ ಡೈರಿಯಲ್ಲಿ ನಮೂದು ಇರುತ್ತದೆ ಎಂದರೆ ಸರಿ. ಆ ದಿನ 8.30 ರಿಂದ 9 ಗಂಟೆಯ ಸಮಯದಲ್ಲಿ ನಾವು ಗಸ್ತಿಗೆ ಹೊರಟಿರುತ್ತೇವೆ. ಆ ದಿನ ನನ್ನನ್ನು ಗಸ್ತಿಗೆ ಮಾತ್ರ ನೇಮಕ ಮಾಡಿದ್ದರು. ಆ ದಿನ ನಾನು, ಚಾಸಾ 4 ಮತ್ತು 5 ಅವರು ಗಸ್ತಿಗೆ ಹೋಗಿದ್ದೇವು. ನಾವು 3 ಜನ ಗಸ್ತಿಗೆ ಹೋದ ಬಗ್ಗೆ ಠಾಣಾ ಡೈರಿಯಲ್ಲಿ ನಮೂದು ಮಾಡಬೇಕಾಗುತ್ತದೆ ಎಂದರೆ ಸರಿ.

ನಾನು ಅಮೃತೂರು ಪೋ. ಠಾಣೆಯಲ್ಲಿ 5 ವರ್ಷಗಳಿಂದ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ನನಗೆ ಅಮೃತೂರು ವ್ಯಾಪ್ತಿಯಲ್ಲಿ ಬರುವ ಎಲ್ಲಾ ಹಳ್ಳಿಗಳ ಮತ್ತು ಸ್ಥಳಗಳ ಪರಿಚಯ ಇರುತ್ತದೆ. ಆ ದಿನ ನಾವು ಅಮೃತೂರು, ಮಾರ್ಕೋನಹಳ್ಳಿ, ಸರ್ಕಲ್, ಹನುಮಾಪುರ, ಯಡಿಯೂರಿನಲ್ಲಿ ಗಸ್ತಿ ಮಾಡಿರುತ್ತೇವೆ. ಯಡಿಯೂರು ಅಮೃತೂರು ದಿಂದ 18 ಕೀ ಮೀ ದೂರದಲ್ಲಿದೆ.

ನಾವು ನಮ್ಮ ಠಾಣೆಯಿಂದ ಹೊರಡುವಾಗ Electronic ವಸ್ತುಗಳನ್ನು ತಗೆದುಕೊಂಡು ಹೋಗಿರುವುದಿಲ್ಲ. ನಾವು ಯಡಿಯೂರು ಬಸ ನಿಲ್ದಾಣದ ಬಳಿ ಗಸ್ತು ಮಾಡುತ್ತಿರುವಾಗ ಮಾಹಿತಿ ಬಂದಿರುತ್ತದೆ. ಯಡಿಯೂರಿನ ಸರ್ಕಲ್ ಬಳಿ ಇರುವ ಬಸ್ ನಿಲ್ದಾಣದ ಬಳಿ ಇದ್ದಾಗ ಮಾಹಿತಿ ಬಂದಿರುತ್ತದೆ. ಡಿ.ಎಸ್.ಪಿ ಅವರು ಜಲದಗೆರೆ ರಸ್ತೆಯ 2ನೇ ಕ್ರಾಸನಲ್ಲಿದ್ದರು. 2 ಜೀಪಗಳನ್ನು ಜಲದಗೆರೆ ರಸ್ತೆಯಲ್ಲಿ ನಿಲ್ಲಿಸಿ ನಡೆದುಕೊಂಡು ಹೋಗಿರುತ್ತೇವೆ. ಸರ್ಕಲ್ ನಿಂದ ಡಿ.ಎಸ್.ಪಿ ಅವರು ನಿಂತ ಸ್ಥಳ 300 ಅಡಿ ಇತ್ತು. ಅಲ್ಲಿಂದ ನಮ್ಮ ಜೀಪನಲ್ಲಿ ಹೋಗಲು 1 ನಿಮಿಷ ಸಾಕುಎಂದು ಹೇಳುತ್ತಾರೆ. ಘಟನಾ ಸ್ಥಳಕ್ಕೆ 2 ನಿಮಿಷದಲ್ಲಿ ನಡೆದುಕೊಂಡು ಹೋಗಿರುತ್ತೇವೆ. ನಾನು ಹೇಳಿಕೆಯಲ್ಲಿ ಅರ್ಧ ಗಂಟೆ ಚರ್ಚೆ ಮಾಡಿದ ಬಗ್ಗೆ ಹೇಳಿಲ್ಲವೆಂದರೆ ಸರಿ.

ನಿ.ಪಿ 3 ರಲ್ಲಿ ಕಿಡಕಿಗಳ ಬಗ್ಗೆ ನಮೂದು ಇಲ್ಲವೆಂದರೆ ಸರಿ. ಮಹಜರನಲ್ಲಿ ಬರೆದ ಎಲ್ಲಾ ಅಂಶಗಳು ನನಗೆ ಗೊತ್ತು. ಮಹಜರನಲ್ಲಿ ಪಶ್ಚಿಮ ದಿಕ್ಕಿನಲ್ಲಿ ರತ್ನಮ್ಮಾ ಅವರಿಗೆ ಸೇರಿದ ಶೆಡ್ ಎಂದು ನಮೂದು ಇದ್ದು ನಿ.ಪಿ 3 ರಲ್ಲಿ ಈ ಬಗ್ಗೆ ನಮೂದು ಇಲ್ಲವೆಂದರೆ ಸರಿ. ಸ್ಕೇಚ್ ಅನ್ನು ಸ್ಥಳದಲ್ಲಿ ತಯಾರು ಮಾಡಿದ ಬಗ್ಗೆ ನನಗೆ ಮಾಹಿತಿ ಇಲ್ಲ. ಜಲದಗೆರೆ ರಸ್ತೆಗೆ ಹೊಂದಿಕೊಂಡು ಅಂದಾಜು 60- 70 ಮನೆಗಳು ಇರುತ್ತವೆ. ಘಟನಾ ಸ್ಥಳದ ಸುತ್ತಮುತ್ತ 6-7 ಮನೆಗಳು ಇವೆ. ನಾವು ಹೋದಾಗ ಸುಮಾರು ಸ್ಥಳೀಯರು ಸೇರಿದ್ದರು. ಎಷ್ಟು ಗಂಟೆಯವರೆಗೆ ನಿಮ್ಮ ಅಧಿಕಾರಿಗಳು ಸ್ಥಳದಲ್ಲಿದ್ದರು ಎಂದರೆ ಸಾಕ್ಷಿ 7.45ರವರೆಗೆ ಇದ್ದರು ಎಂದು ಹೇಳುತ್ತಾರೆ. ಒಟ್ಟು 5 ಜನ ಪೊಲಿಸ ಅಧಿಕಾರಿಗಳು ಸ್ಥಳದಲ್ಲಿದ್ದೇವು. ನಮ್ಮ ಇಲಾಖಾ ವಾಹನಗಳನ್ನು ಘಟನೆ ಆಗಿದೆ ಎಂದು ಹೇಳುವ ಸ್ಥಳದಿಂದ ಪಂಚನಾಮೆ ಮುಗಿಯುವವರೆಗೂ ಯಾರು ತಗೆದುಕೊಂಡು ಹೋಗಿರುವುದಿಲ್ಲ.

ಚಾಸಾ 2 ಮತ್ತು 3 ಅವರು ನಂತರ ಸ್ಥಳಕ್ಕೆ ಬಂದಿರುತ್ತಾರೆ. ಅವರಿಗೆ ನೋಟಿಸ್ ಅನ್ನು ಸ್ಥಳದಲ್ಲಿಯೇ ನೀಡಿರುತ್ತಾರೆ. ಮಹರಜಗೆ ಸ್ಥಳೀಯರ ಸಹಿ ಪಡೆದಿರುವುದಿಲ್ಲ. ಸ್ಥಳದಲ್ಲಿ ಯಾವುದೇ ರಿ ಫಿಲಿಂಗ್ ಮಾಡುತ್ತಿರಲಿಲ್ಲ ನಾನು ನಮ್ಮ ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮು. ಮಾ.ಗಳ ಮೇಲೆ ನಮ್ಮ ಸಹಿ ಪಡೆದಿರುತ್ತಾರೆ. ಮು. ಮಾ. ಗಳಂತಹ ವಸ್ತುಗಳು ಎಲ್ಲಾ ಹಾರ್ಡವೇರ್ ಅಂಗಡಿಯಲ್ಲಿ ದೊರೆಯುತ್ತವೆ ಎಂದರೆ ನನಗೆ ಗೊತ್ತಿಲ್ಲ. ಸ್ಥಳದಲ್ಲಿ ಯಾವುದೇ ಮಹಜರ ಮಾಡಿಲ್ಲ ನಾನು ಸಹಿ ಮಾಡಿಲ್ಲ ಠಾಣೆಯಲ್ಲಿಯೇ ಅದನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಮೇಲಾಧಿಕಾರಿಗಳ ಮಾತು ಕೇಳಿ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂದ ಇಲ್ಲವೆಂದರೆ ಸರಿಯಲ್ಲ. ನಾನು ಸುಳ್ಳು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ಎಫ್.ಐ.ಆರ್ ಬಳಿಕ ಮಹಜರ ಆಗಿರುತ್ತದೆ. ನಾವು ಸ್ಥಳಕ್ಕೆ ಹೋಗಿಲ್ಲ, ಮಹಜರ ಮಾಡಿಲ್ಲ ಠಾಣೆಯ ಅಂಕಿ ಸಂಖ್ಯೆಗಳ ಲೆಕ್ಕಕ್ಕಾಗಿ ಸುಳ್ಳು ಪ್ರಕರಣವನ್ನು ಆರೋಪಿಯ ವಿರುದ್ದ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಸ್ಥಳದಲ್ಲಿ ಸಿಲಿಂಡರಗಳನ್ನು ಜಪ್ತು ಮಾಡಿಲ್ಲವೆಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ:**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ.

ಸಹಿ/-

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.

ಕುಣಿಗಲ್.